# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1443**
ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 16-03-2026
ಉತ್ತರಿಸುವ ಸಚಿವರು ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸದಾಗಿ ಎಷ್ಟು ವಿದ್ಯುತ್ ವಿತರಣ ನಿಗಮಗಳ ಕಾರ್ಯಪಾಲನಾ ಶಾಖೆಗಳನ್ನು ಸ್ಥಾಪಿಸಲಾಗಿದೆ: ವರ್ಷವಾರು ಹಾಗೂ ಕಂಪನಿವಾರು ವಿವರ ನೀಡುವುದು; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯಪಾಲನಾ ಶಾಖೆಗಳನ್ನು ಸ್ಥಾಪಿಸಿರುವ ಕಂಪನಿವಾರು ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. |
| ಆ) | ರಾಜ್ಯದಲ್ಲಿ ಉಪವಿಭಾಗ ವ್ಯಾಪ್ತಿಯಲ್ಲಿ ಹೆಚ್ಚುವರಿ ಕಾರ್ಯಪಾಲನಾ ಶಾಖೆಯನ್ನು ಸ್ಥಾಪಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು: ಗ್ರಾಹಕರ ಸಂಖ್ಯೆ, ಭೌಗೋಳಿಕ ವ್ಯಾಪ್ತಿ, ಆದಾಯ, ಕಾರ್ಯದೊತ್ತಡ, ತಾಂತ್ರಿಕ ಅವಶ್ಯಕತೆ ಇತ್ಯಾದಿಗಳ ಪೈಕಿ ಯಾವುವುಗಳನ್ನು ಆದ್ಯತೆಗೆ ಪರಿಗಣಿಸಲಾಗುವುದು: | ಕಾರ್ಯ ಮತ್ತು ಪಾಲನಾ ಶಾಖೆಗಳನ್ನು ಸ್ಥಾಪಿಸುವಲ್ಲಿ ಹಾಲಿ ಇರುವ Work Load Norms-1975 ರಲ್ಲಿನ ಮಾನದಂಡಗಳನ್ವಯ ಗ್ರಾಹಕರ ಸಂಖ್ಯೆ, ಕಂದಾಯ ಬೇಡಿಕೆ ಮತ್ತು ಆಕರಣೆ, HT/LT ಮಾರ್ಗಗಳ ಉದ್ದ, ಫೀಡರ್‌ಗಳ ಸಂಖ್ಯೆ, ಭೌಗೋಳಿಕ ವ್ಯಾಪ್ತಿ ಮತ್ತು DTCಗಳ ಸಂಖ್ಯೆ, ಇತ್ಯಾದಿ ಅಂಶಗಳನ್ನು ಮಾನದಂಡಗಳನ್ನಾಗಿ ಇದುವರೆಗೆ ಪರಿಗಣಿಸಲಾಗುತ್ತಿತ್ತು,<br><br>ಆದರೆ, ಕಾರ್ಯ ಮತ್ತು ಪಾಲನಾ ಶಾಖೆ, ಉಪವಿಭಾಗ ಮತ್ತು ವಿಭಾಗಗಳನ್ನು ಸ್ಥಾಪಿಸುವಲ್ಲಿ ಈ ಹಿಂದೆ ಇದ್ದ Work Load Normsಗಳನ್ನು ಪರಿಷ್ಕರಿಸಿ, ಪರಿಷ್ಕೃತ Work Load Normಗಳನ್ನು ದಿನಾಂಕ:16.02.2026 ರಂದು ಅನುಮೋದಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ಮೆಸ್ಕಾಂ ವ್ಯಾಪ್ತಿಯಲ್ಲಿ ಹೆಚ್ಚುವರಿ ಕಾರ್ಯಪಾಲನಾ ಶಾಖೆಗಳನ್ನು ಸ್ಥಾಪಿಸಲು ಸ್ವೀಕರಿಸಲಾದ ಪ್ರಸ್ತಾವನೆಗಳ ಸಂಖ್ಯೆ ಎಷ್ಟು: ಅವುಗಳಲ್ಲಿ ಎಷ್ಟು ಪ್ರಸ್ತಾವನೆಗಳನ್ನು ಅಂಗೀಕರಿಸಲಾಗಿದೆ; ಎಷ್ಟು ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗಿದೆ: ಪ್ರಸ್ತಾವನೆಗಳನ್ನು ತಿರಸ್ಕರಿಸುವುದಕ್ಕೆ ಇದ್ದ ಕಾರಣಗಳೇನು: | ಕಳೆದ ಮೂರು ವರ್ಷಗಳಲ್ಲಿ ಹೆಚ್ಚುವರಿ ಕಾರ್ಯ ಮತ್ತು ಪಾಲನಾ ಶಾಖೆಗಳನ್ನು ಸ್ಥಾಪಿಸಲು ಕೋರಿ ಮೆಸ್ಕಾಂ ನಿಯಮಿತದಲ್ಲಿ ಒಟ್ಟು 10 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಈ ಪೈಕಿ ಕೆಳಕಂಡ 3 ಪ್ರಸ್ತಾವನೆಗಳನ್ನು ಮೆಸ್ಕಾಂ ನಿಯಮಿತವು ಸರ್ಕಾರಕ್ಕೆ ಸಲ್ಲಿಸಿರುತ್ತದೆ.<br>• ಹಾಲಿ ಇರುವ ಕಾರ್ಯ ಮತ್ತು ಪಾಲನಾ ಶಾಖೆ, ಮೆಸ್ಕಾಂ, ಬೆಳ್ತಂಗಡಿಯನ್ನು ವಿಭಜಿಸಿ ಹೊಸದಾಗಿ ನಾವೂರು ಕಾರ್ಯ ಮತ್ತು ಪಾಲನಾ ಶಾಖೆಯನ್ನು ರಚಿಸಲು.<br>• ಹಾಲಿ ಇರುವ ಕಾರ್ಯ ಮತ್ತು ಪಾಲನಾ ಶಾಖೆ ಮೆಸ್ಕಾಂ ಕಲ್ಲೇರಿಯನ್ನು ವಿಭಜಿಸಿ ಹೊಸದಾಗಿ ಪದ್ಮುಂಜ ಕಾರ್ಯ ಮತ್ತು ಪಾಲನಾ ಶಾಖೆಯನ್ನು ರಚಿಸಲು. |

| | | |
|---|---|---|
| | | • ಉಪ್ಪಿನಂಗಡಿ ಶಾಖೆಯನ್ನು ಉಪ್ಪಿನಂಗಡಿ, ರಾಮಕುಂಜ ಮತ್ತು ವಳಲು ಎಂದು ಮೂರು ಶಾಖೆಗಳನ್ನಾಗಿ ವಿಭಾಗಿಸಲು<br><br>ಕಾರ್ಯ ಮತ್ತು ಪಾಲನಾ ಶಾಖೆ, ಉಪವಿಭಾಗ ಮತ್ತು ವಿಭಾಗಗಳನ್ನು ಸ್ಥಾಪಿಸುವಲ್ಲಿ ಈ ಹಿಂದೆ ಇದ್ದ Work Load Normsಗಳನ್ನು ಪರಿಷ್ಕರಿಸಿ, ಪರಿಷ್ಕೃತ Work Load Normಗಳನ್ನು ದಿನಾಂಕ:16.02.2026ರಂದು ಅನುಮೋದಿಸಲಾಗಿದ್ದು, ಸದರಿ ಪರಿಷ್ಕೃತ Work Load Normಗಳನ್ವಯ ಮೇಲ್ಕಂಡ ಹೊಸ ಶಾಖಾ ಕಚೇರಿ, ಉಪವಿಭಾಗ ಮತ್ತು ವಿಭಾಗಗಳ ಸೃಜನೆ/ವಿಭಜನೆ/ ಮೇಲ್ದರ್ಜೆಗೆರಿಸುವ ಪ್ರಸ್ತಾವನೆಗಳನ್ನು ನಿಗಮದ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಅಗತ್ಯ ಕ್ರಮವಹಿಸುವಂತೆ ಹಾಗೂ ಅಗತ್ಯವಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮೆಸ್ಕಾಂಗೆ ತಿಳಿಸಲಾಗಿರುತ್ತದೆ.<br><br>ಉಳಿದಂತೆ 7 ಪ್ರಸ್ತಾವನೆಗಳು ಮೆಸ್ಕಾಂ ನಿಯಮಿತದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತವೆ. |
| ಈ) | ಉಡುಪಿ ಜಿಲ್ಲೆಯ ಕುಂದಾಪುರ ಉಪವಿಭಾಗ ವ್ಯಾಪ್ತಿಯಲ್ಲಿ ಹೆಚ್ಚುವರಿ ಕಾರ್ಯಪಾಲನಾ ಶಾಖೆಯನ್ನು ಹುಣ್ಸೆಮಕ್ಕಿ ಹಾಗೂ ತೆಕ್ಕಟ್ಟೆ ಪ್ರದೇಶಗಳಲ್ಲಿ ಸ್ಥಾಪಿಸಲು ಪ್ರಸ್ತಾವನೆ ಸ್ವೀಕರಿಸಲಾಗಿದೆಯೇ: ಸದರಿ ಪ್ರಸ್ತಾವನೆಯ ಪ್ರಸ್ತುತ ಸ್ಥಿತಿಗತಿಗಳೇನು: ಈ ಕುರಿತು ಇಲಾಖೆಯಿಂದ ಇದುವರೆಗೆ ಕೈಗೊಂಡ ಕ್ರಮಗಳೇನು: | ಉಡುಪಿ ಜಿಲ್ಲೆಯ ಕುಂದಾಪುರ ಉಪವಿಭಾಗ ವ್ಯಾಪ್ತಿಯಲ್ಲಿ ಹೆಚ್ಚುವರಿ ಕಾರ್ಯ ಮತ್ತು ಪಾಲನಾ ಶಾಖೆಯನ್ನು ಹುಣ್ಸೆಮಕ್ಕಿ ಹಾಗೂ ತೆಕ್ಕಟ್ಟೆ ಪ್ರದೇಶಗಳಲ್ಲಿ ಸ್ಥಾಪಿಸಲು ಪ್ರಸ್ತಾವನೆಯು ದಿನಾಂಕ 11.03.2023 ರಂದು ಸಲ್ಲಿಕೆಯಾಗಿರುತ್ತದೆ. ಸದರಿ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಹೊಸದಾಗಿ ಎರಡು ಶಾಖೆಗಳನ್ನು ರಚಿಸುವ ಸಂಬಂಧ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. |
| ಉ) | ಕುಂದಾಪುರ ಉಪವಿಭಾಗದಲ್ಲಿ ಕಾರ್ಯದೊತ್ತಡ ಹೆಚ್ಚುತ್ತಿರುವ ಹಿನ್ನೆಲೆ ಹೆಚ್ಚುವರಿ ಕಾರ್ಯಪಾಲನಾ ಶಾಖೆ ಸ್ಥಾಪಿಸುವ ಅಗತ್ಯವಿರುವುದನ್ನು ಸರ್ಕಾರ ಪರಿಗಣಿಸಿರುವುದೇ: ಪರಿಗಣಿಸಿದ್ದರೆ, ಯಾವಾಗ ಹೊಸ ಶಾಖೆಯನ್ನು ಪ್ರಾರಂಭಿಸಲಾಗುವುದು? | |

ಸಂಖ್ಯೆ: ಎನರ್ಜಿ 77 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮಂಜುನಾಥ ಭಂಡಾರಿ ರವರ</u>**

**<u>ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ1443ಕ್ಕೆ ಅನುಬಂಧ:</u>** 1

ಕಳೆದ ಮೂರು ವರ್ಷಗಳಲ್ಲಿ ನೂತನವಾಗಿ ಸ್ಥಾಪಿಸಲಾದ ಕಾರ್ಯ ಮತ್ತು ಪಾಲನಾ ಶಾಖೆಗಳ ಸಂಖ್ಯೆಯ ಕಂಪನಿವಾರು ವಿವರಗಳು:

| ಕಂಪನಿ | 2022-23 | 2023-24 | 2024-25 | 2025-26 (ಜನವರಿ-2026ರ ಅಂತ್ಯಕ್ಕೆ) |
|---|---|---|---|---|
| ಬೆಸ್ಕಾಂ | - | 01 | - | 04 |
| ಸೆಸ್ಕ್ | - | - | 02 | - |
| ಹೆಸ್ಕಾಂ | - | - | - | - |
| ಜೆಸ್ಕಾಂ | - | - | 07 | - |

**<u>ಮೆಸ್ಕಾಂ:</u>** ಮೆಸ್ಕಾಂ ವ್ಯಾಪ್ತಿಯಲ್ಲಿ 245 ಕಾರ್ಯ ಮತ್ತು ಪಾಲನಾ ಶಾಖೆಗಳು ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ಒಟ್ಟು 3 ಹೊಸ ಕಾರ್ಯ ಮತ್ತು ಪಾಲನಾ ಶಾಖೆಗಳ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

1

ಅನುಬಂಧ-2

**ದಿನಾಂಕ 16.02.2026 ರಂದು ಕೊಠಡಿ ಸಂಖ್ಯೆ: 122, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಭಾರ ನಿಯಮಾವಳಿಗಳ (WORK LOAD NORMS) ಪರಿಷ್ಕರಣಾ ಸಮಿತಿ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಡಾ. ರಾಮ್ ಪ್ರಸಾತ್ ಮನೋಹರ್ ವಿ, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ಹಾಗೂ ಅಧ್ಯಕ್ಷರು, ಕಾರ್ಯಭಾರ ನಿಯಮಾವಳಿಗಳ ಅನುಮೋದನಾ ಸಮಿತಿ.
2. ಶ್ರೀ ಡಾ. ಶಿವಶಂಕರ ಎನ್, ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ.
3. ಶ್ರೀಮತಿ ವೈಶಾಲಿ ಎಂ.ಎಲ್, ವ್ಯವಸ್ಥಾಪಕ ನಿರ್ದೇಶಕರು, ಹೆವಿಸಕಂ. [ವಿ.ಸಿ ಮೂಲಕ]
4. ಶ್ರೀ ಕೃಷ್ಣ ಬಾಜಪೇಯಿ, ವ್ಯವಸ್ಥಾಪಕ ನಿರ್ದೇಶಕರು, ಗುವಿಸಕಂನಿ. [ವಿ.ಸಿ ಮೂಲಕ]
5. ಶ್ರೀ ಜಯಕುಮಾರ್ ಆರ್, ವ್ಯವಸ್ಥಾಪಕ ನಿರ್ದೇಶಕರು, ಮವಿಸಕಂ.
6. ಶ್ರೀ ಮುನಿಗೋಪಾಲರಾಜು.ಕೆ.ಎಂ, ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ. [ವಿ.ಸಿ ಮೂಲಕ]
7. ಶ್ರೀ ಕೋದಂಡಪಾಣಿ ಡಿ, ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್.
8. ಶ್ರೀ ರಮೇಶ್ ಹೆಚ್.ಜಿ, ನಿರ್ದೇಶಕರು (ತಾಂತ್ರಿಕ), ಬೆವಿಕಂ ಹಾಗೂ ಅಧ್ಯಕ್ಷರು, ಕಾರ್ಯಭಾರ ನಿಯಮಾವಳಿಗಳ ಪರಿಷ್ಕರಣೆ ಸಮಿತಿ.
9. ಶ್ರೀ ಪ್ರಶಾಂತಕುಮಾರ ಎಸ್.ಬಿ, ಸರ್ಕಾರ ಅಪರ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ.
10. ಶ್ರೀ ವಿಜಯ್ ಬಿ.ಪಿ, ನಿರ್ದೇಶಕರು (ಆ&ಮಾ.ಸಂ), ಕವಿಪ್ರನಿನಿ, ಬೆಂಗಳೂರು.

*****

ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ ರವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

ಸರ್ಕಾರದ ಇಂಧನ ಇಲಾಖೆಯ ದಿನಾಂಕ 24.10.2019ರ ಆದೇಶದಲ್ಲಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯ & ಪಾಲನ ವಿಭಾಗ, 33 ಕೆವಿ ಉಪಕೇಂದ್ರ ನಿರ್ವಹಣೆ, ಮಾಪಕ ವಿಭಾಗ, ಭೂಗತ ಕೇಬಲ್ ಉಪವಿಭಾಗ/ವಿಭಾಗಗಳ ಶಾಖಾ ಮಟ್ಟದಿಂದ ವಿಭಾಗ ಮಟ್ಟದವರೆಗಿನ ತಾಂತ್ರಿಕ & ಲೆಕ್ಕ ನಿರ್ವಹಣೆ/ಸಿಬ್ಬಂದಿ ವರ್ಗದ ಎಲ್ಲಾ ಹುದ್ದೆಗಳ ಕಾರ್ಯಭಾರ ನಿಯಮಾವಳಿಗಳನ್ನು ಪುನರ್ ರೂಪಿಸಲು **"ಕಾರ್ಯಭಾರ ನಿಯಮಾವಳಿಗಳ ಪರಿಷ್ಕರಣಾ ಸಮಿತಿ"** ಯನ್ನು ರಚಿಸಲಾಗಿರುತ್ತದೆ.

ಕಾರ್ಯಭಾರ ನಿಯಮಾವಳಿಗಳಿಗೆ ಸಂಬಂಧಿಸಿದಂತೆ, ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತೆಲಂಗಾಣ, ತಮಿಳು ನಾಡು ಮತ್ತು ಕೇರಳ ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ನಿಯಮಾವಳಿಗಳನ್ನು ಅಧ್ಯಯನ ಮಾಡಲು 4 ತಂಡಗಳನ್ನು ರಚಿಸಿ ವರದಿ ಸಲ್ಲಿಸುವಂತೆ ಆದೇಶಿಸಲಾಯಿತು.

ನೆರೆ ರಾಜ್ಯಗಳ ವರದಿ ಹಾಗೂ ಬೆವಿಕಂನಲ್ಲಿ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿನ ವಿಭಾಗ/ಉಪವಿಭಾಗ/ಶಾಖಾ ಕಛೇರಿಗಳನ್ನು ಅಧ್ಯಯನ ಮಾಡಿ ಸಲ್ಲಿಸಿರುವ ವರದಿಯನ್ವಯ ಕೆಳಕಂಡ ವಿವಿಧ ಮಾನದಂಡಗಳನ್ನು ಕಾರ್ಯಭಾರ ನಿಯಮಾವಳಿಗಳ ಪರಿಷ್ಕರಣಾ ಸಮಿತಿಯು ಚರ್ಚಿಸಿತು;

1. ಕ್ಷೇತ್ರ ಕಛೇರಿ ವ್ಯಾಪ್ತಿಯ ವಿಸ್ತೀರ್ಣ
2. ಸ್ಥಾವರಗಳ ಸಂಖ್ಯೆ
3. ಫೀಡರ್ ಸಂಖ್ಯೆ ಹಾಗೂ ಉದ್ದ
4. ಪರಿವರ್ತಕಗಳ ಸಂಖ್ಯೆ



Scanned with OKEN Scanner

ಸುದೀರ್ಘ ಚರ್ಚೆಯ ನಂತರ ಅಂತಿಮವಾಗಿ ಸ್ಥಾವರವಾರು ಕಾರ್ಯಭಾರ ನಿಯಮಾವಳಿಗಳನ್ನು ಪರಿಷ್ಕರಿಸಲು ಕಾರ್ಯಭಾರ ನಿಯಮಾವಳಿಗಳ ಪರಿಷ್ಕರಣಾ ಸಮಿತಿಯು ಶಿಫಾರಸ್ಸು ಮಾಡಿದೆ.

ಕಾರ್ಯಭಾರ ನಿಯಮಾವಳಿಗಳ ಪರಿಷ್ಕರಣಾ ಸಮಿತಿಯ ಶಿಫಾರಸ್ಸನ್ನು ಸುದೀರ್ಘವಾಗಿ ಚರ್ಚಿಸಿ ಕೆಳಕಂಡ ಹೊಸ ಕಾರ್ಯಭಾರ ನಿಯಮಾವಳಿಗಳನ್ನು ಅನುಮೋದಿಸಿದೆ;

I. ಭಾಗ-'ಎ' :- ಹೊಸದಾಗಿ ಸೃಜಿಸುವ ಮತ್ತು ವಿಭಜಿಸುವ ವಿಭಾಗ/ಉಪವಿಭಾಗ/ಶಾಖಾ ಕಛೇರಿಗಳನ್ನು ಸ್ಥಾವರವಾರು ಪರಿಷ್ಕರಿಸಲು ಮಾನದಂಡಗಳು;

| ಕ್ರ.ಸಂ. | ಕಛೇರಿಯ ಹೆಸರು | ಗ್ರಾಮೀಣ ವ್ಯಾಪ್ತಿ (ಸ್ಥಾವರಗಳ ಸಂಖ್ಯೆ) | ನಗರ ವ್ಯಾಪ್ತಿ (ಸ್ಥಾವರಗಳ ಸಂಖ್ಯೆ) |
|---|---|---|---|
| 1 | ಶಾಖಾ ಕಛೇರಿ | 15000-20000 | 25000-30000 |
| 2 | ಉಪ ವಿಭಾಗ ಕಛೇರಿ | 60000-100000 | 90000-120000 |
| 3 | ವಿಭಾಗ ಕಛೇರಿ | 360000-420000 | |
| 4 | ವೃತ್ತ ಕಛೇರಿ | 1080000-1300000 | |
| 5 | ವಲಯ ಕಛೇರಿ | 2200000-2500000 | |

II. ಭಾಗ-'ಬಿ':- ಪ್ರತಿ ವಿಭಾಗ/ಉಪವಿಭಾಗ/ಶಾಖಾಗಳಲ್ಲಿ ಕಛೇರಿವಾರು ಸಿಬ್ಬಂದಿಗಳ ಮಾನದಂಡಗಳು;

| Staffing pattern for Section Offices | | | |
|---|---|---|---|
| SL NO | Posts | Rural Area | Urban Area |
| 1 | Assistant Engineer (El.) | 1 | 1 |
| 2 | Junior Engineer (El.) | 2 Nos. for Service Station on shift basis | 3 Nos. for Service Station on shift basis |
| 3 | Meter Reader | 2000 to 2500 installations per Meter Reader (13 Working days) | 3500 to 4000 installations per Meter Reader (13 Working days) |
| 4 | Line Mechanic Gr-I | 1 | 1 |
| 5 | Line Mechanic Gr-II | 2 | 2 |
| 6 | Power Man | 4 | 4 |
| 7 | Assistant Power Man | 4 | 6 |
| 8 | Junior Power Man | 6 | 8 |
| SL NO | Posts | Rural Area | Urban Area |
| 9 | Office Attender* | 1 | 1 |
| 10 | Helper* | - | 1 |



Scanned with OKEN Scanner

| Staffing pattern for Sub-Divisions | | | |
|---|---|---|---|
| SL NO | Posts | Rural Sub Division | Urban Sub Division |
| 1 | Assistant Executive Engineer (El.) | 1 | 1 |
| 2 | Assistant Engineer (Technical) | 1 | 1 |
| 3 | Asst. Accounts Officer | 1 | 1 |
| 4 | Senior Assistant | 1 | 1 |
| 5 | Overseer | 1 | 0 |
| 6 | Assistant | 2 | 2 |
| 7 | Junior Assistant | 4 | 4 |
| 8 | Typist / DEO * | 1 | 1 |
| 9 | Daftary | 1 | 1 |
| 10 | Office Attender GR-II | 2 | 2 |
| 11 | Helper* | 1 | 1 |
| 12 | Security* | 1 | 1 |

| Staffing pattern for Division Offices | | |
|---|---|---|
| SL NO | Posts | Urban/Rural Divisions |
| 1 | Executive Engineer (El.) | 1 |
| 2 | Assistant Executive Engineer | 1 |
| 3 | Assistant Engineer (Office) | 3Nos. (2-Office, 1- Transformer) |
| 4 | Junior Engineer (Office) | 2 Nos. (1 No Addnl. JE if more than 3 Sub Divisions) |
| 5 | Accounts Officer (O&M) | 1 |
| 6 | Accounts Officer (Internal Audit) | 1 |
| 7 | Asst. Accounts Officer (O&M) | 2 |
| 8 | Asst. Accounts Officer (Internal | 1 |
| 9 | Store Keeper | 1 |
| 10 | Asst. Store Keeper | 1 |
| 11 | Supervisor | 1 |
| 12 | Senior Assistant | 4 |
| 13 | Senior Assistant (Internal Audit) | 2 |
| 14 | Assistant | 6 |
| 15 | Junior Assistant | 4 |
| 16 | Jr. Personal Asst. | 1 |
| 17 | Typist / DEO * | 2 Nos. (1- Tech Secn. 1- Accts Secn) |
| 18 | Typist (Internal Audit) * | 1 |
| 19 | Daftary | 2 Nos. (1-Record, 1- Muddam Tapal) |
| 20 | Junior Powerman (Stores) | 4 |
| 21 | Office Attender GR-I * | 1 |
| 22 | Office Attender GR-II * | 3 Nos. (1-Technical, 1-Accounts, 1- Internal Audit) |
| SL NO | Posts | Final Recommendation |
| 23 | Helper* | 2 |
| 24 | Security* | 4 Nos. ( 1 For Office & 3 for Stores) |



Scanned with OKEN Scanner

*All these posts if, working on permanent basis to be continued or vacant to be taken on outsource only since recruitment of these posts were stopped.

ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ಕವಿಪ್ರನಿನಿಯ ಕಾರ್ಯಭಾರ ನಿಯಮಾವಳಿಗಳ ಕರಡು ವರದಿಯ ತಯಾರಿಯ ಕಾರ್ಯವನ್ನು ಹೊರಗುತ್ತಿಗೆ ಸಂಸ್ಥೆಗೆ ನೀಡಲಾಗಿದ್ದು, ಶೀಘ್ರದಲ್ಲೇ ಅದನ್ನು ಅಧ್ಯಕ್ಷರ ಮುಂದೆ ಚರ್ಚೆಗೆ ತರಲಾಗುವುದು ಎಂದು ತಿಳಿಸಿದರು.

ಈ ಮೇಲೆ ಅನುಮೋದಿಸಿರುವ ಪರಿಷ್ಕೃತ ಕಾರ್ಯಭಾರ ನಿಯಮಾವಳಿಯನ್ನು ಎಲ್ಲಾ ವಿಸಕಂಗಳು ಕೂಡಲೇ ಅನುಷ್ಠಾನಗೊಳಿಸಲು ಸೂಚಿಸಿದೆ. ಹೆಚ್ಚಿನ ಕಾರ್ಯ ಒತ್ತಡ ಇರುವ ಪ್ರದೇಶಗಳಲ್ಲಿ ಶಾಖಾ ಕಛೇರಿ / ಉಪವಿಭಾಗೀಯ ಕಛೇರಿ / ವಿಭಾಗ ಕಛೇರಿಗಳನ್ನು ವಿಭಜಿಸುವ/ಸೃಜಿಸುವ ಬಗ್ಗೆ ಸಂಬಂಧಿಸಿದ ಮಂಡಳಿ ಸಭೆಯಲ್ಲಿ ವಿಷಯ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಹಾಗೂ ಮೇಲಿನಂತೆ ಸೃಜಿಸಿದ ಕಛೇರಿಗಳಿಗೆ ಅಧಿಕಾರಿ/ಸಿಬ್ಬಂದಿಗಳನ್ನು ಬೇರೆ ಕಡಿಮೆ ಪ್ರಾಮುಖ್ಯತೆಯುಳ್ಳ ಹುದ್ದೆಗಳಿಂದ ಮರುನಿಯೋಜನೆ ಮಾಡುವುದರ ಮೂಲಕ ಕಛೇರಿಗಳನ್ನು ಚಾಲನೆಗೊಳಿಸಲೂ ಸಹ ಸೂಚಿಸಲಾಯಿತು.

ಸಭೆಯನ್ನು ನಡೆಸಿಕೊಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗೌರವ್ ಗುಪ್ತ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಇಂಧನ ಇಲಾಖೆ, ಕರ್ನಾಟಕ ಸರ್ಕಾರ

**ಇವರಿಗೆ :-**

1. ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ/ಪಿಸಿಕೆಎಲ್, ಇಂಧನ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂನಿ/ಚಾವಿಸನಿನಿ.
3. ಸರ್ಕಾರದ ಅಪರ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸಸೌಧ, ಬೆಂಗಳೂರು.
4. ನಿರ್ದೇಶಕರು (ತಾಂತ್ರಿಕ), ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
5. ನಿರ್ದೇಶಕರು (ಆ& ಮಾಸಂ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಇಂಧನ ಭವನ, ಬೆಂಗಳೂರು.
6. ಮುಖ್ಯ ಕಡತ.

Scanned with OKEN Scanner